
## ಮಾತು-ಕತೆ

ನನ್ನ ಮಕ್ಕಳು ಮುಂದಿನ ತಲೆಮಾರು, ಅವರು ಯಾವ ರೀತಿಯಲ್ಲೂ ಭಾರತೀಯರಲ್ಲ. ಭರತನಾಟ್ಯವನ್ನೋ ಶಾಸ್ತ್ರೀಯಸಂಗೀತವನ್ನೋ ಕಲಿಸುವ ಮೂಲಕ ಅವರನ್ನು ಭಾರತೀಯರನ್ನಾಗಿಸುವುದು ನಮ್ಮ ಭ್ರಮೆಯಷ್ಟೇ. ಅಲ್ಲಿಯೇ ಹುಟ್ಟಿರುವ ಅವರ ದೈನಿಕ, ಸ್ನೇಹಿತರು, ಹೊಕ್ಕುಬಳಕೆ ಎಲ್ಲವೂ ಅಲ್ಲಿನಂತೆಯೇ ಇರುತ್ತದೆ. ನನ್ನ ಮಗಳ ವಿಷಯವನ್ನೇ ಹೇಳುವುದಾದರೆ, ಅಮೆರಿಕದಲ್ಲಿ ಹುಟ್ಟಿದ್ದರೂ ಐಡೆಂಟಿಟಿ ಪ್ರಶ್ನೆ ಬಂದಾಗ ಅವಳು ಯಾವಾಗಲೂ ಭಾರತೀಯಳು. ಕಾಲೇಜಿಗೆ ಪ್ರವೇಶ ಪಡೆಯುವಾಗ ಹಿಂದಿ ವಿಷಯವನ್ನು ಆರಿಸಿಕೊಂಡಳು. ಹಿಂದಿ ಕಲಿತುಕೊಂಡು ಪ್ರೇಮಚಂದರ ಕಥೆಗಳನ್ನು ಓದಿದಳು.

ಯಾವುದಾದರೂ ವೃತ್ತಿಪರ ಕೋರ್ಸ್ ಓದಬೇಕಾದರೆ ಅದಕ್ಕೂ ಮುನ್ನ ಅಮೆರಿಕದಲ್ಲಿ ನಾಲ್ಕು ವರ್ಷದ ಪದವಿ ಮಾಡಲೇಬೇಕು. ಆ ನಾಲ್ಕು ವರ್ಷಗಳ ಪದವಿ ಪ್ರವೇಶ ಸಂದರ್ಭದಲ್ಲಿ ನಾನು ಯಾವ ವೃತ್ತಿಪರ ಕೋರ್ಸ್ ಮಾಡುತ್ತೇನೆ ಎಂದು ನಿರ್ಧರಿಸಬೇಕು. ಆಗ ಕೆಲವು ವಿಷಯಗಳನ್ನು ಆರಿಸಿಕೊಳ್ಳುವ ಅವಕಾಶ ಇರುತ್ತದೆ. ಕನ್ನಡ, ಹಿಂದಿ ಆರಿಸಿಕೊಳ್ಳುವ ಅವಕಾಶವೂ ಇದೆ. ಛಾಯಾಗ್ರಹಣ, ಸಿನಿಮಾ ಏನನ್ನು ಬೇಕಾದರೂ ಆರಿಸಿಕೊಳ್ಳಬಹುದು. ಆಸಕ್ತಿಯ ವಿಷಯಗಳನ್ನು ಆರಿಸಿಕೊಳ್ಳಲು ಅಲ್ಲಿನ ಶಿಕ್ಷಣ ವ್ಯವಸ್ಥೆಯಲ್ಲಿ



> “ನನ್ನ ಕೃತಿಗಳಲ್ಲಿ ಪಾತ್ರ–ಪರಿಸರ ಅಷ್ಟೇ ಅಮೆರಿಕ. ಕಥೆ ಕನ್ನಡದ್ದೇ. ಬರಹಗಾರನಾಗಿ ಅಮೆರಿಕದಲ್ಲಿದ್ದೇನೆ ಎನ್ನುವುದು ನನಗೊಂದು ಸಂಗತಿಯಾಗಬೇಕಿಲ್ಲ. ಓದುಗರಿಗೂ ಅಷ್ಟೇ. ಬೆಂಗಳೂರಿನ ಕಥೆ ಬರೆಯುವುದು ನನಗೆ ಕಷ್ಟ. ಈಗ ನನ್ನೊಂದಿಗೆ ಬೆಳೆಯುತ್ತಿರುವ ವಿಶ್ವವನ್ನು ಹಿಡಿದಿಡುವುದು ಮುಖ್ಯ. ನನ್ನ ಸುತ್ತಲಿನ ಜಗತ್ತಿಗೆ ನನ್ನ ಬರವಣಿಗೆಯಿಂದಲೇ ಪ್ರತಿಕ್ರಿಯಿಸುತ್ತೇನೆ. ಕನ್ನಡದಲ್ಲಿಯಷ್ಟೇ ಬರೆಯುವುದು ನನಗೆ ಸಾಧ್ಯ ಹಾಗೂ ನಾನು ಕನ್ನಡ ಓದುಗರಿಗಾಗಿಯೇ ಬರೆಯುವುದು ಎನ್ನುವುದು ತಿಳಿದಿದೆ...”